೨. ವಾಹನ ಚಾಲಕರ ಅನುಕೂಲಕ್ಕಾಗಿ ಸೂಕ್ತ ಸಂಚಾರ ಫಲಕಗಳನ್ನು ಹಾಕಲಾಗಿದೆ.

೩. ಸೂಕ್ತವಾದ ಸ್ಥಳಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಮಾಡಲಾಗಿದೆ.

೪. ರಸ್ತೆ ತಡೆ ಉಬ್ಬುಗಳನ್ನು ಹಾಕಲಾಗಿದೆ,

೫. ಮೋಟಾರು ವಾಹನಗಳ ಕಾಯಿದೆಯ ಆನ್ವಯ ವೇಗ ಮಿತಿ ಮೀರಿ ವಾಹನ ಓಡಿಸುವ ಮಂತ್ತಿತರ ಅಪಾರಾಧಗಳನ್ನು ಹೆಚ್ಚಿ ಹೆಚ್ಚು ಪತ್ತೆ ಹಚ್ಚಲು ಸೂಕ್ತ ನಿರ್ದೇಶನ ನೀಡಲಾಗಿದೆ.

ಶ್ರೀಮತಿ ಸಂಮ ವಸಂತ.—ಸನ್ಮಾನ್ಯ ಅಧ್ಯಕ್ಷರೆ, ಸಂಚಾರ ಫಲಕಗಳನ್ನು ಹಾಕಲಾಗಿದೆ ಎಂದು ಹೇಳಿದ್ದಾರೆ. ಮೈಸೂರು ಬೆಂಗಳೂರು ರಸ್ತೆಯಲ್ಲಿ ಸಂಚಾರ ಫಲಕಗಳಿಲ್ಲ. ಆದರೆ ತಡೆ ಉಬ್ಬುಗಳು ಮಾತ್ರ ಇವೆ. ಏಕಮುಖ ಸಂಚಾರ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಬೆಂಗಳೂರು ಮೈಸೂರು ನಡುವೆ ಏಕಮುಖವಾದ ಸಂಚಾರ ವ್ಯವಸ್ಥೆ ಇಲ್ಲ. ಮತ್ತು ಅಲ್ಲಿ ಪೋಲೀಸ್ ಕಾವಲು ಹಾಕಿದ್ದಾರಾ ?

ಶ್ರೀ ಬಿ. ರಾಚಯ್ಯ.—ಹೆದ್ದಾರಿಯಲ್ಲಿ ಅಪರಾಧಗಳು, ದರೋಡೆಗಳು ಆಗದೇ ಇರುವುದಕ್ಕೆ ಒಂದು ಪೋಲೀಸ್ ಸ್ಕ್ವಾಡ್ ಹಾಕಿದ್ದೇವೆ.

ಹಾವು ಕಡಿತಕ್ಕೆ ಆಸ್ಪತ್ರೆಗಳಲ್ಲಿ ಔಷಧಿಗಳು ದೊರೆಯದಿರುವಿಕೆ.

೬೩೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ಕಡಿತಕ್ಕೆ ಒಳಗಾದವರಿಗೆ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆ (ಈ ಕೆಳಕಂಡ ಆಸ್ಪತ್ರೆಗಳಲ್ಲಿ) ಇದೆಯೇ ?

೧. ಸಾರ್ವತ್ರಿಕ ಆಸ್ಪತ್ರೆ

೨. ಆಯುರ್ವೇದ ಆಸ್ಪತ್ರೆ

೩. ಯುನಾನಿ ಆಸ್ಪತ್ರೆ

ಆ) ಹಾವು ಕಡಿದವರಿಗೆ ನೀಡುವ ಔಷಧಿ ಏನು ?

ಇ) ಸದರಿ ಔಷಧಿ ಸರಬರಾಜು ಇಲ್ಲದೆ ಆಸ್ಪತ್ರೆಗಳು ರೋಗಿಗಳನ್ನು ಶಂಕ್ರಾಪೆಗೆ ನಿರಾಕರಿಸಿ ಸತ್ತ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ೧. ಇದೆ,

೨. ಇಲ್ಲಾ.

೩. ಇಲ್ಲಾ.

ಆ) ಪಾಲಿ ವೆಲೆಂಟ್ ಆ್ಯಂಟಿ ಸ್ನೇಕ್ ವೆನಮ್ ಸೆರಮ್

ಇ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸನ್ಮಾನ್ಯ ಅಧ್ಯಕ್ಷರೆ, ಬಹಳ ಆಸ್ಪತ್ರೆಗಳಲ್ಲಿ ಔಷಧಿ ಮಂಗಿದುಹೋಗಿದೆಯೆಂದು ದೂರುಗಳು ಬರುತ್ತಿವೆ. ಹಾವು ಕಡಿದವರು ಸಾರ್ವಜನಿಕ ಆಸ್ಪತ್ರೆಗೆ ಮಾತ್ರ ಹೋಗಬೇಕು, ಆಯುರ್ವೇದ ಯುನಾನಿ ಆಸ್ಪತ್ರೆಗೆ ಹೋಗಬಾರದು ಎಂಬ ನಿರ್ಬಂಧ ಇದೆಯೇ ? ಔಷಧಿ ಸಿಗದೆ ಹಳ್ಳಿ ಕಡೆಗಳಲ್ಲಿ ಮಾಟ ಮಂತ್ರ ಹಾಕಿಸಿಕೊಂಡು ಚಿಕಿತ್ಸೆ ಇಲ್ಲದೆ ಜನ ಸಾಯುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಮ್ಮ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಮತ್ತು ಡಿಸ್ಪೆನ್ಸರಿ ಸರ್ಜನ್‌ಗಳಿಗೆ ಈ ಔಷಧಿ ತೆಗೆದಿಡಬೇಕೆಂದು ಹೇಳಿದ್ದೇವೆ. ಯಾವ ಹಾವು ಕಡಿದರೂ ಉಪಯೋಗವಾಗುವ ಇಂಜೆಕ್ಷನ್‌ಗಳನ್ನು ಇಡಲಾಗಿದೆ. ಅದನ್ನು ಎರಡು ಕಡೆ ಮಾತ್ರ ತಯಾರು ಮಾಡುತ್ತಾರೆ. ಬಾಂಬೆ ಮತ್ತು ಕಲ್ಕತ್ತದಲ್ಲಿ ಮಾತ್ರ ಅದನ್ನು ತಯಾರು ಮಾಡುತ್ತಾರೆ. ಆದ್ದರಿಂದ ನಾವು ಕೇಳಿದಷ್ಟು ಔಷಧಿಗಳನ್ನು ಅವರು ಸಪ್ಲೈ ಮಾಡುವುದಿಲ್ಲ. ಹಾಗಿದ್ದರೂ ನಾವು ಕ್ರಮ ತೆಗೆದುಕೊಂಡು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಈ ಔಷಧಿ ಇಡುವಂತೆ ವ್ಯವಸ್ಥೆ ಮಾಡುತ್ತಿದ್ದೇವೆ. ಜನರು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳಿಗೆ ಹೋಗಬಾರದೇ ಎಂದು ಕೇಳಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಜಯಚಾಮರಾಜೇಂದ್ರ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮೆಡಿಸನ್‌ನಲ್ಲಿ ಇದನ್ನು ಮಾಡಬಹುದಕ್ಕೆ ಹೇಳಿದ್ದೇವೆ. ಡಾ॥ ವೇದಾಂತರಾವ್ ಎಂಬುವರು ಹತ್ತು ಗಿಡ ಮೂಲಿಕೆಗಳನ್ನು ಬೆಳೆಸಿ ಅದರಿಂದ ಔಷಧಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸಧ್ಯದಲ್ಲಿ ಹಾವು ಕಡಿದಿದ್ದಕ್ಕೆ ಆಯುರ್ವೇದ ಆಸ್ಪತ್ರೆಯಲ್ಲಿ ವ್ಯವಸ್ಥೆ ಇಲ್ಲ.

ಮೀನುಗಾರಿಕೆ ಇಲಾಖೆಯಿಂದ ಮಂಜೂರಾದ ದೋಣಿಗಳು,

೮೯೮. ಶ್ರೀ ಗೋಪಾಲ ಮುಕುಂದ ಕಾನಡೆ (ಶಿರ್ಸಿ).—ಮಾನ್ಯ ಮೀನುಗಾರಿಕೆ ಹಾಗೂ ಬಂದರುಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ೧೯೫೩ ರಿಂದ ೧೯೫೫ ರವರೆಗೆ ಮೀನುಗಾರಿಕೆ ಇಲಾಖೆಯಲ್ಲಿ ಅಮಾನತ್ತಿನಲ್ಲಿ ಇಡಲಾದ ಹಾಗೂ ಪಜಾ ಮಾಡಲ್ಪಟ್ಟ ನೌಕರರ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ಕಾರಣಗಳೇನು ? (ವರ್ಗವಾರು ಹಾಗೂ ಜಾತಿವಾರು ಪಟ್ಟಿ ನೀಡುವುದು)

ಆ) ಮೀನುಗಾರಿಕೆ ಇಲಾಖೆಯಲ್ಲಿನ ಒಟ್ಟು ದೋಣಿಗಳ ಸಂಖ್ಯೆ ಎಷ್ಟು ? (ಯಾರ ಯಾರ ಹೆಸರಿನಲ್ಲಿ ಇರುವುದು)

ಇ) ಹಾಗಿದ್ದಲ್ಲಿ ಹರಿಜನ ಗಿರಿಜನರಿಗೆ ಮಂಜೂರಾದ ದೋಣಿಗಳ ಸಂಖ್ಯೆ ಎಷ್ಟು ? ಹಾಗೂ ದೋಣಿಗಳ ಮಂಜೂರಾತಿ ಕುರಿತು ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಈ) ೧೯೫೪-೫೫ ರಲ್ಲಿ ಮಂಜೂರು ಮಾಡಿದ ಸಂಖ್ಯೆ ಎಷ್ಟು ?